

# ಬೇರೆ ಬೇರೆ ದೋಣಿಯಲಿ...

■ ವಿಶಾಖ ಎನ್‌

‘ದೀಪ್‌–ವೀರ್’ ಹೀಗೊಂದು ಜೋಡಿ ಹೆಸರನ್ನು ದೀಪಿಕಾ ಪಡುಕೋಣೆ ಹಾಗೂ ರಣವೀರ್ ಸಿಂಗ್ ವಿಷಯದಲ್ಲಿ ತೇಲಿಬಿಟ್ಟಿದ್ದರು. ಅಭಿಮಾನಿಗಳ ಈ ಪ್ರೀತಿ ಪದವನ್ನು ಬಾಲಿವುಡ್‌ನ ಜೋಡಿ ಹೆಚ್ಚು ಕಾಲ ಉಜ್ಜಲು ಹೋಗಲಿಲ್ಲ. ಸಹ ನಟ–ನಟಿಯಾಗಿಯೇ ಹೆಚ್ಚು ಕಾಲ ಒಡನಾಡಿದ್ದ ದೀಪಿಕಾ, ರಣವೀರ್ ವಿವಾಹದ ನಂತರ ಪ್ರತ್ಯೇಕವಾಗಿ ಚಿತ್ರಗಳಲ್ಲಿ ನಟಿಸುವ ಪ್ರಕ್ರಿಯೆಗೆ ಪ್ರಜ್ಞಾಪೂರ್ವಕವಾಗಿ ಒಳಪಟ್ಟರು.

‘ಗೆಹೆರಾಯಿಯಾಂ’ ಸಿನಿಮಾದ ಪ್ರಚಾರ ಕಾರ್ಯದಲ್ಲಿ ನಿರತರಾಗಿರುವ ದೀಪಿಕಾ ಸಂದರ್ಶನವೊಂದರಲ್ಲಿ ತಮ್ಮಿಬ್ಬರ ಹೊಸ ಪಯಣದ ಹಾದಿಯನ್ನು ಬಿಚ್ಚಿಟ್ಟಿದ್ದಾರೆ.

‘ಪದ್ಮಾವತ್’ ಸಿನಿಮಾ ನಂತರ ರಣವೀರ್ ಅಭಿನಯದ ‘ಗಲ್ಲಿ ಬಾಯ್’ ತೆರೆಕಂಡಿತು. ‘ಸಿಂಬಾ’ ಕೂಡ ಯಶಸ್ವಿಯಾಯಿತು. ಈ ಚಿತ್ರಗಳನ್ನು ದೂರದಿಂದಲೇ ನೋಡಿ ವಿಮರ್ಶೆ ಮಾಡಿದ್ದು ದೀಪಿಕಾ. ‘ಛಪಕ್’ ತೆರೆಕಂಡಾಗ ಅದರ ಪ್ರೀಮಿಯರ್ ಶೋಗೆ ಹೋಗಿ, ದೀಪಿಕಾ ಕೆಲಸವನ್ನು ರಣವೀರ್ ಕೊಂಡಾಡಿದ್ದನ್ನೂ ನಾವು ಮರೆತಿಲ್ಲ. ಇತ್ತೀಚೆಗೆ ತೆರೆಕಂಡ ‘83’ ಸಿನಿಮಾದಲ್ಲಿ ದೀಪಿಕಾ ಹಾಗೂ ರಣವೀರ್ ಒಟ್ಟಿಗೆ ನಟಿಸಿದ್ದಾರಾದರೂ ಅದರಲ್ಲಿ ನಾಯಕಿಯಾಗಿ ಈ ನಟಿಗೆ ಹೆಚ್ಚೇನೂ ಕೆಲಸವಿಲ್ಲ. ಮುಖ್ಯಪಾತ್ರವಾಗಿ ಎಷ್ಟು ಬೇಕೋ ಅಷ್ಟೇ ತೆರೆ ಮೇಲೆ ಅವರಿಗೆ ಅವಕಾಶ ಸಿಕ್ಕಿದ್ದು.

ಇಬ್ಬರೂ ತಂತಮ್ಮ ಇಷ್ಟದ ಪ್ರತ್ಯೇಕ ಸಿನಿಮಾಗಳಲ್ಲಿ ಅಭಿನಯಿಸಲು ಮೊದಲು ಆರಂಭಿಸಿದಾಗ ಅದೊಂದು ರೀತಿ ವಿಚಿತ್ರ ಭಾವ ದೀಪಿಕಾ ಅವರಲ್ಲಿ ಮೊದಲಿಗೆ ಮೂಡಿತ್ತಂತೆ. ಆಮೇಲೆ ಕೆಲಸದ ದೃಷ್ಟಿಯಿಂದ ಅದನ್ನು ಜೀರ್ಣಿಸಿಕೊಳ್ಳುತ್ತಾ, ಪರಸ್ಪರ ವಿಮರ್ಶೆ–ವಿಶ್ಲೇಷಣೆಗೆ ಒಡ್ಡಿಕೊಳ್ಳುವುದು ರೂಢಿಯಾದದ್ದು.

‘ಗೆಹೆರಾಯಿಯಾಂ’ ಸಿನಿಮಾದ ಪ್ರೋಮೊ ಬಿಡುಗಡೆಯಿಂದ ಹಿಡಿದು ಅದು ತೆರೆಕಾಣಲು ಅಣಿಯಾಗಿರುವ ಈ ಹೊತ್ತಿನವರೆಗೆ ರಣವೀರ್ ಸಾಧ್ಯವಾದಾಗಲೆಲ್ಲ ಅದರ ಪ್ರಚಾರದಲ್ಲಿ ತೊಡಗಿದ್ದರು. ಸಾಮಾಜಿಕ ಜಾಲತಾಣಗಳ ಎಲ್ಲ ಸಾಧ್ಯತೆಗಳನ್ನು ಅವರು ಇದಕ್ಕಾಗಿ ಬಳಸಿಕೊಂಡರು. ಫೆ. 11ರಂದು ಅಮೆಜಾನ್ ಪ್ರೈಮ್ ಒಟಿಟಿಯಲ್ಲಿ ‘ಗೆಹೆರಾಯಿಯಾಂ’ ತೆರೆಕಾಣಲಿದೆ. ದೀಪಿಕಾ ಅಲ್ಲದೆ ಸಿದ್ಧಾರ್ಥ್ ಚತುರ್ವೇದಿ ಹಾಗೂ ಅನನ್ಯಾ ಪಾಂಡೆ ಈ ಚಿತ್ರದ ಮುಖ್ಯಪಾತ್ರಧಾರಿಗಳು.

■

# ಪೂಜಾ ಅಲ್ಪವಿರಾಮ

‘ಸದ್ಯಕ್ಕೆ ನನಗೆ ಯಾವ ಕೆಲಸವೂ ಇಲ್ಲ’ – ಹೀಗೆಂದು ಪೂಜಾ ಹೆಗ್ಡೆ ಅದೊಂದು ದಿನ ಆಪ್ತೇಷ್ಟರಲ್ಲಿ ಹೇಳಿದಾಗ ಅವರಿಗೆಲ್ಲ ಅಚ್ಚರಿ. ‘ರಾಧೆ ಶ್ಯಾಮ್’, ‘ಆಚಾರ್ಯ’, ‘ಬೀಸ್ಟ್’ ತರಹದ ದೊಡ್ಡ ತೆಲುಗು–ತಮಿಳಿನ ಚಿತ್ರಗಳು ಬಿಡುಗಡೆಗೆ ಕಾಯ್ದಿರುವಾಗ, ಮಹೇಶ್ ಬಾಬು ನಟನೆಯ ತೆಲುಗು ಚಿತ್ರಕ್ಕೆ ನಾಯಕಿಯಾಗಿ ಸಹಿ ಹಾಕಿರುವಾಗ ಖಾಲಿ ಕೂರುವ ಮಾತೆಲ್ಲಿ ಎಂದು ಆ ಬಂಧುಮಿತ್ರರು ಮರುಪ್ರಶ್ನೆ ಹಾಕಿದ್ದು ಸಹಜವೇ.

ಪೂಜಾ ಹೆಗ್ಡೆ ಸದ್ಯಕ್ಕೆ ಮಹೇಶ್ ಬಾಬು ನಾಯಕರಾಗಿರುವ, ತ್ರಿವಿಕ್ರಮ್ ನಿರ್ದೇಶನದ ಹೊಸ ಚಿತ್ರಕ್ಕಷ್ಟೆ ಸಹಿ ಹಾಕಿರುವುದು. ಮಿಕ್ಕ ಸಿನಿಮಾ ಕೆಲಸಗಳೆಲ್ಲ ಮುಗಿದಿವೆ. ಕೋವಿಡ್ ಕಾರಣದಿಂದಾಗಿ ಸಹಿ ಹಾಕಿದ ಕೊನೆಯ ಚಿತ್ರದ ಕೆಲಸಗಳೂ ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. ಇದನ್ನೇ ಅಲ್ಪವಿರಾಮದ ಅವಕಾಶವಾಗಿ ಪೂಜಾ ಪರಿವರ್ತಿಸಿಕೊಂಡಿದ್ದಾರಷ್ಟೆ.

ಇತ್ತೀಚೆಗಷ್ಟೆ ಅವರು ಮುಂಬೈನಲ್ಲಿ ಐಷಾರಾಮಿ ಮನೆಯೊಂದನ್ನು ಕೊಂಡುಕೊಂಡರು. ಅದಕ್ಕೆ ಮಾಡಿರುವ ದೊಡ್ಡ ಖರ್ಚನ್ನು ನೋಡಿದವರು ಪೂಜಾ ಮತ್ತೆ ಚಿತ್ರಗಳಿಗೆ ಸಹಿ ಹಾಕುವುದರಲ್ಲಿ ಅನುಮಾನವೇ ಇಲ್ಲ ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

ಪೂಜಾ ಹೆಗ್ಡೆ ಮಾರುಕಟ್ಟೆ ಪರಿಣತರನ್ನು ಸಂಪರ್ಕಿಸಿಯೇ ಇಂತಹ ನಿರ್ಣಯ ಕೈಗೊಂಡಿದ್ದಾರೆ ಎನ್ನುವ ಮಾತೂ ಇದೆ. ತೆರೆಕಾಣಬೇಕಿರುವ ಸಿನಿಮಾಗಳು ಬಂದಮೇಲೆ ಅವರು ಹಿಂದಿ ಚಿತ್ರಗಳತ್ತ ಅಥವಾ ಬಹುಭಾಷಾ ಚಿತ್ರಗಳತ್ತ ಮುಖಮಾಡುವ ಸಾಧ್ಯತೆ ಇದೆ. ಅಲ್ಲು ಅರ್ಜುನ್ ಜತೆ ಪೂಜಾ ನಟಿಸಿದ್ದ ‘ಅಲಾ ವೈಕುಂಠಪುರಮುಲೊ’ ತೆಲುಗು ಚಿತ್ರ ದೊಡ್ಡ ಹಿಟ್ ಆಗಿತ್ತು.

■

